ದಿನಾಂಕ 25-02-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1 ರಿಂದ 6ನೇ ಪ್ರತಿವಾದಿಗಳ ಪರ ಶ್ರೀ ಎನ್.ಎಸ್.ಎಸ್., ವಕೀಲರಿಂದಃ-

8. ಸರ್ವೇ ನಂ.4/2, ಸರ್ವೇ ನಂ.5/2ಎ ನ ಚಕ್ಕುಬಂದಿ ಹೇಳಬಹುದಾ ಎಂದರೆ ಸಾಕ್ಷಿಯು ನಾನು ಓದಿಲ್ಲ, ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎರಡೂ ಸರ್ವೇ ನಂಬರ್‌ಗಳ ಒಟ್ಟು ವಿಸ್ತೀರ್ಣ 1 ಎಕರೆ 30 ಗುಂಟೆ. ವೀರಾಚಾರಿಯ ಮಗ ರುದ್ರಾಚಾರಿಯನ್ನು ನಾನು ನೋಡಿದ್ದೇನೆ. ವೀರಾಚಾರಿಯ ಮಗ ರುದ್ರಾಚಾರಿಯವರೇ ಬೇರೆ, ನಮ್ಮ ತಂದೆ ರುದ್ರಾಚಾರಿಯೇ ಬೇರೆ ಎಂದರೆ ಸರಿ. ವೀರಾಚಾರಿಯವರ ಮಗ ರುದ್ರಾಚಾರಿ ಹುಟ್ಟಿದಾಗಿನಿಂದ ಜೀವನಪರ್ಯಂತ ಮಾಯಗಾನಹಳ್ಳಿಯಲ್ಲೇ ಇದ್ದರು ಎಂದರೆ ಸರಿ. ನನ್ನ ತಂದೆಯ ತಂದೆಯ ಹೆಸರು ಹುಚ್ಚಪ್ಪ. ನನ್ನ ತಾತ ಹುಚ್ಚಪ್ಪ ಹುಟ್ಟಿದಾಗಿನಿಂದ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ತೊರೆಬೊಮ್ಮನಹಳ್ಳಿಯಲ್ಲೇ ವಾಸ ಎಂದರೆ ಸರಿ. ತೊರೆಬೊಮ್ಮನಹಳ್ಳಿಯಲ್ಲಿರುವ ಆಸ್ತಿಗಳನ್ನು ನಮ್ಮ ತಂದೆ ಇದ್ದಾಗಲೇ ಅವರೇ ಭಾಗ ಮಾಡಿ ಕೊಟ್ಟಿದ್ದರು.

9. ನನ್ನ ತಂದೆಯ ಹಿರಿಯ ಮಗ ರಾಜಣ್ಣ. ಅವರು ಮದುವೆಯಾಗದೇ ತೀರಿಕೊಂಡರು, ಎರಡನೇ ಮಗ ಸುಂದರಾಚಾರಿ @ ವೀರಭದ್ರಾಚಾರಿ, ಮೂರನೇ ಮಗ ಗೌರಯ್ಯ ಪ್ರತಿವಾದಿ 7 ಮತ್ತು 8ರವರ ತಂದೆ, ನಾಲ್ಕನೇ ಮಗ ನಾಗೇಂದ್ರಚಾರಿ, ಅವರಿಗೆ ಮದುವೆಯಾಗಿರಲಿಲ್ಲ ಮತ್ತು ನಾನು ಕೊನೆಯ ಮಗ. ತೊರೆಬೊಮ್ಮನಹಳ್ಳಿಯಲ್ಲಿರುವ ಎಲ್ಲಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದೇವೆ. ಈ ಸಂಬಂಧ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ಅಣ್ಣ ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಮೊದಲಿಗೆ ದಾವೆ ಸಲ್ಲಿಸಿದ್ದು ಮಾಯಗಾನಹಳ್ಳಿಯಲ್ಲಿರುವ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಎಂದರೆ ಸರಿ. ದಾವಾ ಐಟಂ ನಂ.2 ತೊರೆಬೊಮ್ಮನಹಳ್ಳಿಯಲ್ಲಿರುವ ಆಸ್ತಿ. ದಾವಾ ಐಟಂ ನಂ.2 ಮತ್ತು 3ರ ಸ್ವತ್ತುಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತೊರೆಬೊಮ್ಮನಹಳ್ಳಿಯಲ್ಲಿರುವ ಆಸ್ತಿಗಳನ್ನು ಭಾಗ ಮಾಡಿಕೊಂಡು ಸುಮಾರು 40 ರಿಂದ 50 ವರ್ಷಗಳಾಗಿವೆ. ಸದರಿ ಆಸ್ತಿಗಳ ಸಂಬಂಧ ಭಾಗ ಆಗಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಭಾಗ ಕೇಳಿ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4ನ್ನು ಸೇರಿಸುವ ಅವಶ್ಯಕತೆ ಏನಿತ್ತು ಎಂದರೆ ಸಾಕ್ಷಿಯು ನನ್ನ ಅಣ್ಣ ಸುಂದರಾಚಾರಿ ಅಲ್ಲೇ ವಾಸವಿದ್ದರು, ಈಗ ಸುಂದರಾಚಾರಿಯ ಮಕ್ಕಳು ಹಳೆ ಮನೆ ಉರುಳಿಸಿ ಆರ್.ಸಿ.ಸಿ. ಮನೆ ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

10. ದಿನಾಂಕ 06.03.1957ರ ದಾನಪತ್ರವನ್ನು ರದ್ದು ಮಾಡಿ ಎಂದು ಕೋರಿದ್ದೀರಿ, ಅದು ಯಾವ ದಾಖಲೆ ಎಂದರೆ ಸಾಕ್ಷಿಯು ನನ್ನ ತಾತ ನನ್ನ ತಾಯಿಗೆ ಬರೆದುಕೊಟ್ಟಿರುವ ದಾನಪತ್ರ ಎಂದು ನುಡಿಯುತ್ತಾರೆ. ಅಂದರೆ ನನ್ನ ತಾತ ಅವರ ಸ್ವಂತ ಮಗಳಾದ ನನ್ನ ತಾಯಿಗೆ ಬರೆದುಕೊಟ್ಟಿರುವ ದಾನಪತ್ರ. ದಾನಪತ್ರವನ್ನು ನನ್ನ ತಾಯಿಯ ತಂದೆಯಾದ ರುದ್ರಾಚಾರಿಯವರು ರುದ್ರಮ್ಮ, ಕಾಮಾಕ್ಷಮ್ಮ, ಸಾವಿತ್ರಮ್ಮ ಮತ್ತು ನನ್ನ ತಾಯಿ ಗೌರಮ್ಮರವರಿಗೆ ಬರೆದುಕೊಟ್ಟಿದ್ದಾರೆ. ನನ್ನ ತಂದೆ ರುದ್ರಾಚಾರಿ ಕುಲ ಕಸುಬು ಮಾಡಿಕೊಂಡು ತೊರೆಬೊಮ್ಮನಹಳ್ಳಿಯಲ್ಲೇ ವಾಸವಿದ್ದರು ಎಂದರೆ ಸರಿ. ರುದ್ರಾಚಾರಿಯವರ ಪತ್ನಿ ಸಹ ಗೌರಮ್ಮ, ಅವರ ಮಗಳು ಸಹ ಗೌರಮ್ಮ ಎಂದರೆ ಸರಿ.

11. ಸುಂದರಾಚಾರಿಯವರು 15 ವರ್ಷ ವಯಸ್ಸಿನವರಾಗಿದ್ದಾಗಲೇ ಮಾಯಗಾನಹಳ್ಳಿಗೆ ಬಂದು ಬೆಳೆದು ಅಲ್ಲೇ ಮದುವೆಯಾಗಿ, ತೀರಿಕೊಂಡರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವಇಚ್ಛೆಯಿಂದ ನನ್ನ ತಾಯಿ ತೀರಿಕೊಂಡು 77 ವರ್ಷಗಳಾಗಿವೆ ಎಂದು ನುಡಿಯುತ್ತಾರೆ. ಸುಂದರಾಚಾರಿ ತೀರಿಕೊಂಡು 7-8 ವರ್ಷಗಳಾಗಿರಬಹುದು. ಅವರು ಮಾಯಗಾನಹಳ್ಳಿಯಲ್ಲೇ ತೀರಿಕೊಂಡರು ಎಂದರೆ ಸರಿ. ಅವರನ್ನು ಮಾಯಗಾನಹಳ್ಳಿಯ ಜಮೀನಿನಲ್ಲೇ ದಫನ್ ಮಾಡಲಾಯಿತು. ಸುಂದರಾಚಾರಿಯವರು 15 ವರ್ಷಗಳ ನಂತರ ಹೆಂಡತಿ

ಮಕ್ಕಳ ಜೊತೆ ದಾವಾ ಐಟಂ ನಂ.1 ಮತ್ತು 4ರಲ್ಲೇ ಇದ್ದರು ಎಂದರೆ ಸಾಕ್ಷಿಯು ನಮ್ಮ ತಂದೆಯವರೇ ಇರಿಸಿದ್ದು ಎಂದು ನುಡಿಯುತ್ತಾರೆ. ಸುಂದರಾಚಾರಿಯವರು ಸಾವಿತ್ರಮ್ಮನವರಿಗೆ ಮಾಡಿರುವ ದಾನಪತ್ರವನ್ನು ನಾವು ಪ್ರಶ್ನೆ ಮಾಡಿಲ್ಲ. ಕಾಮಾಕ್ಷಮ್ಮನವರ ಆಸ್ತಿ ಹಾಗೆಯೇ ಇದೆ, ರುದ್ರಮ್ಮರವರು ಅವರ ಆಸ್ತಿಗಳನ್ನು ಮಾರಿಕೊಂಡಿದ್ದಾರೆ. ದಿನಾಂಕ 06.03.1957ರ ದಾನಪತ್ರವನ್ನು ರದ್ದು ಮಾಡಬೇಕೆಂದು ನಾನು ಕೋರಿರುವುದು ಸುಳ್ಳು, ಅದನ್ನು ರದ್ದು ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಮತ್ತು 5 ಸುಂದರಾಚಾರಿಯವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಮತ್ತು 5 ನಮ್ಮ ಅಣ್ಣ ತಮ್ಮಂದಿರ ನಡುವೆ ವಿಭಜನೆಗೆ ಒಳಪಡುವಂತಹ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ಸುಂದರಾಚಾರಿಯವರ ಹೆಸರಿಗೆ ಆಗಿರುವ ಪಹಣಿ, ಖಾತೆಯನ್ನು ನಾವು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ತೀರಿಕೊಂಡರು ಎಂದು ನುಡಿಯುತ್ತಾರೆ. ಸುಂದರಾಚಾರಿಯವರ ಪತ್ನಿ, ಮಕ್ಕಳ ಹೆಸರಿಗೆ ಆಗಿರುವ ಖಾತೆ, ಪಹಣಿಯನ್ನು ನೀವು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನಮ್ಮ ಅಣ್ಣ ಪ್ರಶ್ನೆ ಮಾಡಿರಬಹುದು ಎಂದು ನುಡಿಯುತ್ತಾರೆ. ಗೌರಯ್ಯನ ಮಗ ಮಹೇಶನನ್ನು ವಿಚಾರಣೆ ಮಾಡಿಸಬಲ್ಲೆ. ದಾವಾ ಐಟಂ ನಂ.1 ಮತ್ತು 5ರಲ್ಲಿ ನಮಗೆ ಯಾವುದೇ ಹಕ್ಕಿಲ್ಲ, ಅವು ಸುಂದರಾಚಾರಿಗೆ ನೇರವಾಗಿ ಬಂದಿರುವ ಸ್ವತ್ತುಗಳು ಹಾಗೂ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.